**1ನೇ ಅಪರ ಜಿಲ್ಲಾ  ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು, ಬಳ್ಳಾರಿ.**

**ವಿಶೇಷ ಮೊಕದ್ದಮೆ ಸಂಖ್ಯೆ ಃ 1274 /2018**

ಫಿರ್ಯಾದಿದಾರ ಃ ಸರ್ಕಾರದ ಪರಃ ಡೆಪ್ಯೂಟಿ ಪೊಲೀಸ್ ಸೂಪರಿಂಟೆಂಡೆಂಟ್,
ನಗರ ಉಪ ವಿಭಾಗ, ಬಳ್ಳಾರಿ.

ಃ ವಿರುದ್ಧ ಃ

ಆರೋಪಿಗಳು ಃ ಯಾಲ್ಪಿ ವಲಿ ಭಾಷಾ.

**ದೋಷಾರೋಪಣೆ**

ನಾನು, ಕೆ.ಎಂ.ಚೂರಿಖಾನ್ ಬಿ.ಎ., ಎಲ್ಎಲ್.ಎಂ, 1ನೇ ಅಪರ ಜಿಲ್ಲಾ  ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು, ಬಳ್ಳಾರಿ, ಈ ಮೂಲಕ ಆರೋಪಿತರಾದ,

ಯಾಲ್ಪಿ ವಲಿ ಭಾಷಾ ತಂದೆ ಹುಸ್ಮಾನ್ ಸಾಬ್, 29 ವರ್ಷ ವಾಸಃ ವಾರ್ಡ್ ನಂಃ 19, ರಾಘವೇಂದ್ರಕಾಲೋನಿ, ಅಯ್ಯಪ್ಪ ಸ್ವಾಮಿ ಗುಡಿ ಹತ್ತಿರ, ಬಳ್ಳಾರಿ

ನಿಮ್ಮ ಮೇಲೆ ನಿರೂಪಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 04–08–2017 ಸಾಕ್ಷಿ ನಂಃ 1-ದಿನಕರ್ ಎಸ್ ರವರು ತಮ್ಮ ಮೇಲಾಧಿಕಾರಿಗಳೊಂದಿಗೆ ಬಳ್ಳಾರಿಯ ರಾಣಿ ತೋಟದಲ್ಲಿರುವ ಗಾಂಜಾ ಅಡ್ಡೆ ಮೇಲೆ ದಾಳಿಗೆ ಹೋದಾಗ ಆರೋಪಿಯಾದ ನೀನು ನಿನ್ನ ಮೋಬೈಲ್ ನಂಃ8904000080 ನೇದ್ದರಿಂದ ಸಾಕ್ಷಿ-1 ರವರ ಮೋ.ನಂಃ9448262605 ನೇದ್ದಕ್ಕೆ ಕರೆ ಮಾಡಿ ಗಾಂಜಾ ಕಿಂಗ್ ಪಿನ್ ದೌಲಾ ಅಲಿಯಾಸ್ ಗಾಂಜಾದೌಲನ ಹೆಸರನ್ನು ಸೇರಿಸಬಾರದೆಂದು ಹಾಗೂ ಎಷ್ಟೇ ಗಾಂಜಾ ಸಿಕ್ಕರೂ 300 ಗ್ರಾಂ ಗಿಂತಲೂ ಹೆಚ್ಚಿಗೆ ಇಡಬಾರದೆಂದು ದಮ್ಕಿ ಹಾಕಿದ್ದು , ಆರೋಪಿಯಾದ ನೀನು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದ ನಿನ್ನ ಪರಿಚಯಸ್ಥರಿಗೆ ಸಹಾಯ ಮಾಡಲು ಅನೇಕ ಸಲ ಸಾಕ್ಷಿ-1 ರವರಿಗೆ ಹೇಳಿದ್ದು, ಸಾಕ್ಷಿ-1 ರವರು ನಿರಾಕರಿಸಿದ್ದರಿಂದ ನಿನ್ನ ಜಾಗೃತಿ ಕಿರಿಣ ಪಾಕ್ಷಿಕ ಪತ್ರಿಕೆ ದಿನಾಂಕಃ 16.11.17 ರಿಂದ 30.11.17 ರಲ್ಲಿ ಸಾಕ್ಷಿ-1 ರವರ ಬಗ್ಗೆ ಯಾವುದೇ ಪ್ರಾಮಾಣಿಕ

ದಾಖಲಾತಿಗಳು ಇಲ್ಲದಿದ್ದರೂ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಾಕ್ಷಿ-1 ರವರಿಗೆ ಕರ್ತವ್ಯ ನಿರ್ವಹಿಸಲು ಅಡ್ಡಿಯುಂಟು ಮಾಡಿ, ಆರೋಪಿತನಾದ ನೀನು ಭಾ.ದ.ಸಂ. ಕಲಂ 353 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನಾದ ನೀನು ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಾಕ್ಷಿ-1 ರವರ ಬಗ್ಗೆ ಈ ಮೇಲೆ ತಿಳಿಸಿದ ನಿನ್ನ ಪತ್ರಿಕೆಯಲ್ಲಿ ಬರಹದ ಮೂಲಕ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಬರೆದು ಅವಮಾನ ಮಾಡಿ ಆ ಮೂಲಕ ಅವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಃ ಉದ್ರೇಕದಿಂದ ಅವರು ಶಾಂತಿ ಭಂಗವನ್ನು ಉಂಟು ಮಾಡಲೆಂಬ ಅಥವಾ ಇತರ ಯೂವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದು, ಭಾ.ದ.ಸಂ. ಕಲಂ 504 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನಾದ ನೀನು ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಾಕ್ಷಿ ನಂ:1 ರವರಿಗೆ ಬಹರದ ಮೂಲಕ ಪ್ರಾಣ ಬೆದರಿಕೆ ಹಾಕಿ, ಭಾ.ದ.ಸಂ. ಕಲಂ 506 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನಾದ ನೀನು ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಸಾಕ್ಷಿ ನಂ:1 ರವರ ಮೇಲೆ ಯಾವುದೇ ಪ್ರಾಮಾಣಿಕ ದಾಖಲಾತಿಗಳು ಇಲ್ಲದಿದ್ದರೂ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಬರಹದ ಮೂಲಕ ಕರ್ತವ್ಯ ನಿರ್ವಹಿಸಲು ಅಡ್ಡಿಯುಂಟು ಮಾಡಿ, ಕ್ಷತಿಯನ್ನುಂಟು ಮಾಡಿದ್ದರಿಂದ ಅವರು ತನ್ನ ಮನೆಯವರ, ಸಂಬಧಿಕರ, ಸ್ನೇಹಿತರ, ತನ್ನ ಜೊತೆ ಕೆಲಸ ಮಾಡುವವರ ಜೊತೆ ಅವಮಾನಕ್ಕೆ ಒಳಗಾಗಿ ನೋವುಂಟಾಗಿದ್ದು, ಭಾ.ದ.ಸಂ. ಕಲಂ 189 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿತನಾದ ನೀನು ಸದರಿ ಸಾಕ್ಷಿ-1 ರವರ ಮೇಲೆ ಹಲ್ಲೆ ಮಾಡುವ ಉದ್ದೇಶದಿಂದ, ಅವರು ಪರಿಶಿಷ್ಟ ಜಾತಿಗೆ (ಆದಿ ದ್ರಾವಿಡ) ಸೇರಿದವರೆಂದು ತಿಳಿದಿದ್ದೂ ಸಹ ಅವರು ಸಾರ್ವಜನಿಕ ಕರ್ತವ್ಯ ನಿರ್ವಹಿಸುತ್ತಿರುವಾಗ ಕರ್ತವ್ಯ ನಿರ್ವಹಿಸದಂತೆ ಅಡ್ಡಿಪಡಿಸಿ ಅವಮಾನ ಮಾಡಿ, ನಿನ್ನ ಪತ್ರಿಕೆಯಲ್ಲಿ ಸಾಕ್ಷಿ-1 ರವರ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಬರಹದ ಮೂಲಕ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ, ಬೆದರಿಕೆ ಹಾಕಿರುವುದು ಮತ್ತು ಜಾತಿ ನಿಂದನೆ ಮಾಡಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು (ದೌರ್ಜನ್ಯಗಳ ತಡೆ) ಅಧಿನಿಯಮ 1989ರ ಕಲಂಃ 3(1)(ಯು) ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಆರೋಪಿಯಾದ ನೀನು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ಈ ಮೂಲಕ ಆದೇಶಿಸುತ್ತೇನೆ.

ದಿನಾಂಕ 4 ನೇ ಜೂನ್ , 2019.

1ನೇ ಅಪರ ಜಿಲ್ಲಾ ಮತ್ತು ಸತ್ರ ಹಾಗೂ ವಿಶೇಷ ನ್ಯಾಯಾಧೀಶರು,
ಬಳ್ಳಾರಿ.